1. ಸೂಳ್ಯ ತಾಲ್ಲೂಕಿನ ಬೆಳ್ಳಾರೆಯಲ್ಲಿ (ಪೆರುವಾಜೆ) ಸರ್ಕಾರಿ ಪ್ರಥಮ ದರ್ಜೆ ಕಾಲೇಜನ್ನು ಯಾವಾಗ ಮಂಜೂರು ಮಾಡಲಾಯಿತು; ಈ ಕಾಲೇಜು ಕಟ್ಟಡದ ಅಂದಾಜು ವೆಚ್ಚ ಎಷ್ಟು? ಈಗಾಗಲೇ ಎಷ್ಟು ಅನುದಾನವನ್ನು ಒದಗಿಸಲಾಗಿದೆ;

2. ಸದರಿ ಕಾಲೇಜಿನ ಕಟ್ಟಡ ಕಾಮಗಾರಿಯನ್ನು: ಯಾವಾಗ ಪೂರ್ಣಗೊಳಿಸಲಾಗುವುದು?

ಡಾ: ಜಿ. ಪರಮೇಶ್ವರ (ಉನ್ನತ ಶಿಕ್ಷಣ ಸಚಿವರು) :

1. 1991-92ನೇ ಸಾಲಿನಲ್ಲಿ ಮಂಜೂರಾಗಿರುತ್ತದೆ. ರೂ.6.6 ಲಕ್ಷದ ಅಂದಾಜು ವೆಚ್ಚದ ಕಾಲೇಜಿನ ಮೊದಲನೇ ಹಂತದ ಕಟ್ಟಡ ರೂ.7.6 ಲಕ್ಷಗಳ ವೆಚ್ಚದಲ್ಲಿ ಮುಕ್ತಾಯವಾಗಿರುತ್ತದೆ.

2. ಉದ್ಭವಿಸುವುದಿಲ್ಲ.

**ಡಾ।। ಶಿವರಾಮ ಕಾರಂತ ಪ್ರಥಮ ದರ್ಜೆ ಕಾಲೇಜು, ಬೆಳ್ಳಾರೆ (ಪೆರುವಾಜೆ) ಸುಳ್ಯ ತಾಲ್ಲೂಕಿನ ಕಾಲೇಜಿನಲ್ಲಿ ಉಪನ್ಯಾಸಕರ ಕೊರತೆ**

419 (446) ಶ್ರೀ ಅಂಗಾರ ಎಸ್. (ಸೂಳ್ಯ): ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಡಾ: ಶಿವರಾಮ ಕಾರಂತ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬೆಳ್ಳಾರೆ (ಪೆರುವಾಜೆ) ಸುಳ್ಯ ತಾಲ್ಲೂಕು ಇಲ್ಲಿ ಎಷ್ಟು ಜನ ಉಪನ್ಯಾಸಕ ಹುದ್ದೆಗಳಿಗೆ ಮಂಜೂರಾತಿ ನೀಡಲಾಗಿದೆ; ಈಗ ಸೇವೆಯಲ್ಲಿರುವ ಉಪನ್ಯಾಸಕರ ಹುದ್ದೆಗಳು ಎಷ್ಟು;

2. ಉಪನ್ಯಾಸಕರ ಕೊರತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಖಾಲಿ ಇರುವ ಹುದ್ದೆಗಳನ್ನು ಯಾವಾಗ ಭರ್ತಿ ಮಾಡಲಾಗುವುದು?

ಡಾ।। ಜಿ. ಪರಮೇಶ್ವರ (ಉನ್ನತ ಶಿಕ್ಷಣ ಸಚಿವರು) :

1. 11

06

2. ಹೌದು.

ಈ ಪ್ರಸ್ತಾವನೆ ಪರಿಶೀಲನೆಯಲ್ಲಿದೆ.

**ರಾಜ್ಯ ಸರ್ಕಾರ ಅರೆ ಕಾಲಿಕ ಉಪನ್ಯಾಸಕರನ್ನು ಖಾಯಂ ಗೊಳಿಸುವುದು**

420 (360) ಅಪ್ಪಚ್ಚು ರಂಜನ್ ಎಂ.ಪಿ. (ಸೋಮವಾರ ಪೇಟೆ): ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ರಾಜ್ಯ ಸರ್ಕಾರ 1993, 1994-95 ಹಾಗೂ ಇದಕ್ಕೂ ನಂತರದ ಹೆಚ್ಚಿನ ವರ್ಷಗಳ ಕಾಲ ಅರೆಕಾಲಿಕವಾಗಿ ಉಪನ್ಯಾಸಕರ ಸೇವೆಯನ್ನು ಪಡೆದಿದ್ದು ನಿಜವೇ;

2. ಯಾವ ಅರ್ಹತೆಯ ಆಧಾರದ ಮೇಲೆ ಆಗ ನೇಮಕ ಮಾಡಿಕೊಳ್ಳಲಾಗಿತು; ಮತ್ತು ಯುಜಿಸಿ ನೇಮಕ ನಿಯಮವು ಜಾರಿಗೆ ಬಂದಿದ್ದು ಯಾವಾಗ;

3. ಶೇ.55ಕ್ಕಿಂತ ಕಡಿಮೆ ಅಂಕ ಪಡೆದಿದ್ದ ಸ್ನಾತಕ ಪದವಿ ಅಭ್ಯರ್ಥಿಗಳನ್ನು ಅರೆಕಾಲಿಕ ಸೇವೆಗೂ ಪರಿಗಣಿಸಲಾಗಿತ್ತೇ;

4. ಪರಿಗಣಿಸಿದ್ದಲ್ಲಿ ಸುಪ್ರೀಂಕೋರ್ಟ್ ತೀರ್ಪಿನುಸಾರ ಪಾಯಂಮಾತಿ ಪ್ರಕ್ರಿಯೆಗೆ ಇವರನ್ನು ಅನ್ವಯಗೊಳಿಸುವುದಿಲ್ಲವೇಕೆ;

5. ಶೇ.55 ಕ್ಕೂ ಹೆಚ್ಚಿನ ಅಂಕಗಳ 1144 ಅಭ್ಯರ್ಥಿಗಳನ್ನು ಪ್ರಥಮ ದರ್ಜೆ ಕಾಲೇಜುಗಳಿಗೆ ಪಾಯಂಗೊಳಿಸುತ್ತಿರುವಾಗ ಶೇ.55 ಕ್ಕಿಂತ ಕಡಿಮೆ ಅಂಕಗಳನ್ನು ಪಡೆದು ಅಭ್ಯರ್ಥಿಗಳ ಸ್ಥಿತಿ ಬಗ್ಗೆ ಸರ್ಕಾರದ ನಿಲುವೇನು;

6. ಶೇ. 55 ಕ್ಕಿಂತ ಕಡಿಮೆ ಅಂಕಗಳನ್ನು ಪಡೆದ ಅಭ್ಯರ್ಥಿಗಳು ಒಟ್ಟು ಎಷ್ಟು ಜನ, ಹೆಸರು ವಿವರ ನೀಡುವುದು;

7. ಇಂತಹವರುಗಳನ್ನು ಪದವಿ ಪೂರ್ವ ಕಾಲೇಜುಗಳಿಗೆ ಏಕೆ ನೇಮಕ ಮಾಡಿಕೊಳ್ಳಬಾರದು ಇದು ಸರ್ಕಾರದ ಪರಿಶೀಲನೆಯಲ್ಲಿದೆಯೇ; ಈ ಬಗ್ಗೆ ಸರ್ಕಾರ ಕೈಗೊಂಡು ಕ್ರಮಮಗಳೇನು;

8. ಈ ಅರೆಕಾಲಿಕ ಉಪನ್ಯಾಸಕರನ್ನು ಏನು ಮಾಡಬೇಕೆಂದು ಸರ್ಕಾರ ನಿರ್ಧರಿಸಿದೆ?

ಡಾ॥ ಜಿ. ಪರಮೇಶ್ವರ (ಉನ್ನತ ಶಿಕ್ಷಣ ಸಚಿವರು):

1. ಹೌದು

2. ಹೆಚ್ಚುವರಿ ಕಾರ್ಯಭಾರಕ್ಕನುಗುಣವಾಗಿ ಸಂಬಂಧಪಟ್ಟ ವಿಷಯದ ಸ್ನಾತಕೋತ್ತರ ಪದವಿಯಲ್ಲಿ ಶೇ.50 ಕ್ಕಿಂತ ಹೆಚ್ಚು ಅಂಕಗಳನ್ನು ಪಡೆದ ಅಭ್ಯರ್ಥಿಗಳನ್ನು ತಾತ್ಕಾಲಿಕವಾಗಿ ಅರೆಕಾಲಿಕ ಉಪನ್ಯಾಸಕರಾಗಿ ನೇಮಕ ಮಾಡಿಕೊಳ್ಳಲಾಗಿತ್ತು ದಿನಾಂಕ 1.10.86ರಿಂದ ಯುಜಿಸಿ ನಿಯಮವು ಜಾರಿಗೆ ಬಂದಿರುತ್ತದೆ.

3. ಹೌದು

4. ಅರೆಕಾಲಿಕ ಉಪನ್ಯಾಸಕರುಗಳನ್ನು ಸೇವಾ ಸಕ್ರಮಗೊಳಿಸುವ ವಿಷಯ ಕುರಿತಂತೆ 1996 ಕರ್ನಾಟಕ ನಾಗರೀಕ ಸೇವೆಗಳು (ಕರ್ನಾಟಕ ಶಿಕ್ಷಣ ಇಲಾಖಾ) ಸೇವೆಯಲ್ಲಿ ಕಾರ್ಯನಿರತರಾದ ಅರೆಕಾಲಿಕ ಉಪನ್ಯಾಯಕರ ವಿಲೀನ) (ಕಾಲೇಜು ಶಿಕ್ಷಣ ಇಲಾಖೆ) (ವಿಶೇಷ) ನಿಯಮಾವಳಿಗಳನ್ನು ಸರ್ಕಾರಿ ಅಧಿಸೂಚನೆ ಸಂಖ್ಯೆ:ಡಿಪಿಎಆರ್-48-ಎಸ್ಆರ್ಇ-96 ದಿನಾಂಕ 22.1.97ರಲ್ಲಿ ರೂಪಿಸಲಾಗಿದೆ. ಈ ಸಂಬಂಧ ಸರ್ವೋಚ್ಚ ನ್ಯಾಯಾಲಯವು ದಿನಾಂಕ:4.1.2001ರ ತೀರ್ಪಿನಲ್ಲಿ ದಿನಾಂಕ:22.1.97ರನ್ವಯ ರೂಪಿಸಿದ ನಿಯಮಾವಳಿಗಳನ್ನು ಎತ್ತಿಹಿಡಿದಿದ್ದು, ಸದರಿ ನಿಯಮಾವಳಿಗಳ ವ್ಯಾಪ್ತಿಯಲ್ಲಿ ಸಕ್ರಮಗೊಳ್ಳಲು ಅರ್ಹತೆ ಪಡೆಯುವ ಅಭ್ಯರ್ಥಿಗಳು ಯುಜಿಸಿ ನಿಗಧಿಪಡಿಸಿರುವ ಎನ್.ಇ.ಟಿ. ಪರೀಕ್ಷೆಯನ್ನು ಸಕ್ರಮಗೊಂಡ ಅಭ್ಯರ್ಥಿಗಳು ಮೂರು ವರ್ಷಗಳ ಒಳಗಡೆ ಪಾಸುಮಾಡಿಕೊಳ್ಳತಕ್ಕದ್ದೆಂಬ ಷರತ್ತನ್ನು ವಿಧಿಸಿದೆ.. ಈ ಹಿನ್ನಲೆಯಲ್ಲಿ ದಿನಾಂಕ 22.1.97ರ ವಿಶೇಷ ನಿಯಮಾವಳಿಗಳಿಗೆ ತಿದ್ದುಪಡಿ ತರಲು ಕರಡು ತಿದ್ದುಪಡಿಯನ್ನು ದಿನಾಂಕ 31.1.2002ರಂದು ಪ್ರಕಟಿಸಲಾಗಿದೆ. ತಿದ್ದುಪಡಿ ಅಂತಿಮ ರೂಪಗೊಂಡ ನಂತರ ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಅನುಸಾರ ಅರೆಕಾಲಿಕ ಉಪನ್ಯಾಸಕರುಗಳನ್ನು ಸಕ್ರಮಗೊಳಿಸಲು ಪರಿಶೀಲಿಸಲಾಗುವುದು.

5. ಈ ಸಂಬಂಧ ಅಧಿಸೂಚನೆ ಸಂಖ್ಯೆ:ಸಿಆತಸು೧-64-ಸೇನಿ೧-96 ದಿನಾಂಕ 29.3.97 ರನ್ವಯ ವಿಶೇಷ ಕರಡು ನಿಯಮಾವಳಿಗಳನ್ನು ರಚಿಸಲಾಗಿದೆ. ಸದರಿ ನಿಯಮಾವಳಿಗಳನ್ನು ಅಂತಿಮಗೊಳಿಸಬೇಕಾಗಿದ್ದು. ಅದು ಪರಿಶೀಲನೆಯಲ್ಲಿದೆ.

6. ಪ್ರಶ್ನೆ 5ಕ್ಕೆ ಎದುರಾಗಿ ನೀಡಿರುವ ಉತ್ತರಗಳ ಹಿನ್ನಲೆಯಲ್ಲಿ ತಿದ್ದುಪಡಿ ಆದೇಶ ಅಂತಿಮಗೊಂಡ ನಂತರ ಈ ಅಂಶವನ್ನು ಪರಿಶೀಲಿಸಬೇಕಾಗಿದೆ.

7. ಈ ಸಂಬಂಧ ಅಧಿಸೂಚನೆ ಸಂಖ್ಯೆ:ಸಿಆತಸು೧-64-ಸೇನಿ೧-96 ದಿನಾಂಕ 29.3.97ರನ್ವಯ ವಿಶೇಷ ಕರಡು ನಿಯಮಾವಳಿಗಳನ್ನು ರಚಿಸಲಾಗಿದೆ. ಸದರಿ ನಿಯಮವಳಿಗಳನ್ನು ಅಂತಿಮಗೊಳಿಸಬೇಕಾಗಿದ್ದು, ಅದು ಪರಿಶೀಲನೆಯಲ್ಲಿದೆ.

8. ಮೇಲಿನ ಉತ್ತರ ಇದಕ್ಕೂ ಅನ್ವಯಿಸುತ್ತದೆ.

## ರಾಜ್ಯದಲ್ಲಿರುವ ಗ್ರಾಮ ಪಂಚಾಯ್ತಿ ಅಧ್ಯಕ್ಷ ಉಪಾಧ್ಯಕ್ಷರ ಕಾಲವಧಿ

421 (769) ಶ್ರೀ ಅಪ್ಪಚ್ಚು ರಂಜನ್ ಎಂ.ಪಿ. (ಸೋಮವಾರ ಪೇಟೆ): ಮಾನ್ಯ ಗ್ರಾಮೀಣಾಭಿವೃದ್ದಿ ಮತ್ತು ಪಂ.ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ರಾಜ್ಯದಲ್ಲಿರುವ ಒಟ್ಟು ಗ್ರಾಮ ಪಂಚಾಯತಿಗಳ ಸಂಖ್ಯೆ ಎಷ್ಟು ; ಅಧ್ಯಕ್ಷ ಉಪಾಧ್ಯಕ್ಷರ ಸೇವಾವಧಿ ವಿವರ ನೀಡಿ; ಸೇವಾ ಅವಧಿಯ ಸಮಯವನ್ನು ಯಾವ ಮಾನದಂಡದ ಮೇಲೆ ನಿಗಧಿಪಡಿಸಲಾಗುವುದು;

2. ಗ್ರಾಮ ಪಂಚಾಯತಿಗಳಿಗೆ ನೇರವಾಗಿ ಅಧಿಕಾರ ಮತ್ತು ಅನುದಾನವನ್ನು ಹೆಚ್ಚಿಸುವುದು ಸರ್ಕಾರದ ಪರಿಶೀಲನೆಯಲ್ಲಿದೆಯೇ;

3. ಈ ಸದಸ್ಯರುಗಳಿಗೆ ಗೌರವಧನ, ಸಭೆಯ ವೇತನವನ್ನು ಹೆಚ್ಚಿಸುವ ವಿಚಾರ ಸರ್ಕಾರದ ಮುಂದಿದೆಯೇ;

4. ಸರ್ಕಾರದಿಂದ ಪಂಚಾಯತ್ ರಾಜ್ ಅಭಿವೃದ್ಧಿಗಾಗಿ ಎಷ್ಟು ಮೊತ್ತದ ಅನುದಾನವನ್ನು 2002-2003ನೇ ಸಾಲಿಗೆ ಮಂಜೂರು ಮಾಡಿ ಬಿಡುಗಡೆಗೊಳಿಸಲಾಗಿದೆ; ಎಷ್ಟು ಬಾಕಿ ಇದೆ; ಜಿಲ್ಲಾವಾರು ವಿವರ ನೀಡುವುದು?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು):

1. ರಾಜ್ಯದಲ್ಲಿರುವ ಗ್ರಾಮ ಪಂಚಾಯತ್‌ಗಳ ಸಂಖ್ಯೆ 5659. ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 46 ಉಪಪ್ರಕರಣ 1 ರಲ್ಲಿ ನಿಗಧಿಪಡಿಸಿರುವಂತೆ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಸೇವಾವಧಿಯು ಅವರ ಚುನಾವಣೆಯ ದಿನಾಂಕದಿಂದ 30 ತಿಂಗಳುಗಳವರೆಗೆ ಅಥವಾ ಆತನ ಸದಸ್ಯತ್ವ ಮುಗಿಯುವವರೆಗೆ ಇವರೆಡರಲ್ಲಿ ಯಾವುದು ಮೊದಲನೇ ಅಲಿಯವರೆಗೆ ಇರುತ್ತದೆ.

2. ಪರಿಶೀಲನೆಯಲ್ಲಿದೆ

3. ಪರಿಶೀಲನೆಯಲ್ಲಿದೆ

4. ಪಟ್ಟಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ.